ಹುಡುಗರೊಂದಿಗೆಲ್ಲಾ ಹೇಳಿಕೊಂಡಿತ್ತೋ ಏನೋ! ವಸುಂಧರಮ್ಮನಿಗೆ ಕಸಿವಿಸಿಯಾಯಿತು. ಇವತ್ತು ಮನೆಗೆ ಹೋದ ಕೂಡಲೇ ಅವನಿಷ್ಟಗಿವಾದ ಗೋಧಿ ಹಲ್ವ ಮಾಡಿಕೊಡಬೇಕು ಎಂದುಕೊಂಡರು.

ಅಲ್ಲ?... ಇವರ ಅಕೌಂಟಿನಲ್ಲಿ ದುಡ್ಡಿರಲಿಲ್ಲವ?... ಅಲ್ಲಿರೋದು ಕಡಿಮೆ ಆದರೆ, ಇರೋ ಆಸ್ತೀಲಿ ಯಾವುದಾದರೊಂದು ಮಾರಿದರಾಯಿತು. ತಕ್ಷಣಕ್ಕೆ ಕೊಳ್ಳುವವರು ಸಿಗೋಲ್ಲ, ಮಾರಾಟ ಮಾಡೋಕ್ಕೆ ಆಗೊಲ್ಲ ಅಂದರೆ, ಬ್ಯಾಂಕಿನಲ್ಲಿ ಯಾವುದಾದರೂ ಆಸ್ತಿ ಪತ್ರ ಅಡವಿಟ್ಟರೆ ಆಯಿತು! ಇಪ್ಪತ್ತು ಲಕ್ಷ ಹೊಂದಿಸೋದು ಏನೇನೂ ಕಷ್ಟವಲ್ಲ. ಆದರೆ, ಮಕ್ಕಳು ಹೀಗೇಕೆ ಮಾಡಿದರು!?... ಇವರು ಜೀವನವೆಲ್ಲಾ ಕಷ್ಟಪಟ್ಟು ಕೂಡಿಟ್ಟದು, ನೆಂಟರು ಇಷ್ಟರ ಮುಂದೆ ಘನತೆ, ಗೌರವಗಳನ್ನ ಕಾಪಾಡಿಕೊಂಡು ಬಂದುದು ಎಲ್ಲವೂ ಮಣ್ಣಿಗೆ ಹೊಯ್ದಂತೆ ಆಯ್ತಲ್ಲ!?... ವಸುಂಧರಮ್ಮನ ಗಮನ ಗಂಡನ ಮುಖದ ಮೇಲೇಯೇ ಸುರುಳಿ ಸುತ್ತಿಕೊಂಡು ಆಡುತ್ತಿದ್ದ ನೊಣದ ಕಡೆಗೆ ಹೋಯಿತು. ಎದ್ದು, ಕೈಯಲ್ಲಿ ಹಿಡಿದಿದ್ದ ಚೌಕದಲ್ಲಿ ಗೋವಿಂದ ಭಟ್ಟರ ಮುಖದ ಹತ್ತಿರ ಗಾಳಿ ಹಾಕಿ, ಪ್ರಯಾಸಪಟ್ಟು ನೊಣವನ್ನು ಓಡಿಸಿದರು. ಹಾಗೇ ಗಂಡನ ಹಣೆಯನ್ನು ಮೆದುವಾಗಿ ತಮ್ಮ ಬಲಗೈಯಿಂದ ತಡವಿ, ಕ್ಷಣ ಅಲ್ಲಿಯೇ ನಿಂತು, ಪುನಃ ತಮ್ಮ ಆಸನಕ್ಕೆ ಬಂದು ಕುಳಿತರು.

ಇವರಿಗೆ ಯಾವಾಗಲಿಂದಲೋ ಕೂಡಿಡುವ ಬುದ್ಧಿ... ದೇವಪುರದಲ್ಲಿದ್ದಾಗ, ಎಲ್ಲಾ ಮಕ್ಕಳೂ ಕೈಗೆ ನಾಲ್ಕಾಣೆ ಸಿಕ್ಕಿದರೆ ಸಾಕು, ಮಿಠಾಯಿ ತೊಗೊಂಡು ತಿಂತಿದ್ದರೆ, ಇವರು ಮಾತ್ರ ಕಿಟ್ಟಪ್ಪನ ಅಂಗಡೀಲಿ ಕಾರ್ಡು ಕಟ್ಟುತ್ತಿರಲಿಲ್ಲವೇ?... 'ಯಾಕೋ ಗೋವಿಂದ, ನಿನಗೆ ಮಿಠಾಯಿ ತಿನ್ನೋ ಆಸೆ ಇಲ್ಲವೇ?' ಅಂತ ಕೇಳಿದರೆ, 'ಈಗ ಮಿಠಾಯಿ ತಿಂದ್ರೆ, ಮುಂದೆ ಪರೀಕ್ಷೆ ಫೀಜು ಕಟ್ಟೋರು ಯಾರು?... ನನ್ನ ತಮ್ಮಂದಿರಿಗೆ ಬುದ್ಧಿ ಇಲ್ಲ' ಅಂತಿದ್ದರು. ಹೌದು.. ಇವರ ತಂದೆ ಬೇಗ ತೀರಿಕೊಂಡು ಬಿಟ್ಟರು. ಮನೆಗೆ ಯಾರಾದರೂ ಹೊರಗಿನಿಂದ ನೆಂಟರು ಬಂದರೆ, ಮಕ್ಕಳಿಗೆಲ್ಲಾ ಚಿಲ್ಲರೆ ಕಾಸು ಕೊಟ್ಟು ಹೋಗ್ತಿದ್ದರು. ಇವರ ತಮ್ಮಂದಿರಾದ ಶ್ರೀನಿವಾಸ, ನಾಗರಾಜರು ತಕ್ಷಣ ಏನಾದರೂ ಕೊಂಡು ತಿಂದು, ಕೈ ಖಾಲಿ ಮಾಡ್ಕೋತಿದ್ದರು. ಆದರೆ, ಇವರು ಮಾತ್ರ ಎಂದೂ ತಿನ್ನುವುದಕ್ಕೆ, ಉಣ್ಣುವುದಕ್ಕೆ ಆಸೆ ಪಟ್ಟವರಲ್ಲ. ಮೊದಲು ಮನೇಲಿ ಗೋಲಕದಲ್ಲಿಯೇ ದುಡ್ಡು ಕೂಡಿಸಿಡ್ತಾ ಇದ್ದರಂತೆ. ಒಂದು ದಿನ ಶ್ರೀನಿವಾಸನೂ, ನಾಗರಾಜನೂ ಚಾಕುವಿನಿಂದ ಗೋಲಕದ ಕಿಂಡಿ ಅಗಲ ಮಾಡಿ, ಕಾಸನ್ನು ತಮ್ಮ ಜೋಳಿಗೆಗೆ ಉದುರಿಸಿಕೊಳ್ಳುತ್ತಿದ್ದದ್ದು ನೋಡಿಬಿಟ್ಟರಂತೆ... ಆಗಲಿಂದ ಕಿಟ್ಟಣ್ಣನ ಅಂಗಡೀಲಿ ಕಾರ್ಡು ಕಟ್ಟೋಕ್ಕೆ ಶುರುಮಾಡಿದರಂತೆ.

ದೇವಪುರದಲ್ಲಿ ನಮ್ಮದು ನಾರಾಯಣನ ದೇವಸ್ಥಾನದ ಬಲಬೀದಿಯಲ್ಲಿ ಮನೆಯಾದರೆ, ಇವರದು ಎಡಬೀದಿಯಲ್ಲಿ ಮನೆ. ನಾನು ಶ್ರೀನಿವಾಸನ ವಯಸ್ಸಿನೋಳು... ಇಬ್ಬರೂ ಒಂದೇ ಕ್ಲಾಸು. ಆದರೆ, ಆಟಕ್ಕೆ ಬಿಟ್ಟಾಗ ನನಗಿಂತ ಒಂದು ಕ್ಲಾಸು ಮುಂದಿದ್ದ ಇವರೂ ಸಿಗ್ತಿದ್ದರು. ನನಗೆ ಎಷ್ಟೋ ಸಲ ಗಣಿತದ ಕಷ್ಟವಾದ ಲೆಕ್ಕಗಳನ್ನ ಹೇಳಿಕೊಡ್ತಿದ್ದರು. ಪ್ರತಿ ದಿನ ರಾತ್ರಿ ದೇವಸ್ಥಾನದಲ್ಲಿ ಮಹಾಮಂಗಳಾರತಿ ಆದ ಮೇಲೆ ಇವರೇ ಪ್ರಸಾದ ಹಂಚಲು ನಿಂತಿರುತ್ತಿದ್ದು, ನನ್ನ ಮುಖ ಕಂಡರೆ ಮುಗುಳುನಕ್ಕು, ದೊನ್ನೆಗೆ ಎರಡೆರಡು ಸಲ ಪ್ರಸಾದ ಹಾಕುತ್ತಿದ್ದರಲ್ಲ?.. ಅಪ್ಪ ಗುಬ್ಬಿಯಲ್ಲಿ ಟೈಲರಿಂಗ್ ಶಾಪ್ ಇಟ್ಟಿದ್ದರು. ಅವರು ಗುಬ್ಬಿಯಿಂದ ಬಂದು, ದೇವಪುರದ ಬಸ್ ಸ್ಟಾಪಿನಲ್ಲಿ ಲಗ್ಗೇಜುಗಳ ಜೊತೇಲಿ ಇಳಿದರೆ, ಅವರನ್ನು ಮಾತಾಡಿಸಿಕೊಂಡು, ಅವರ ಕೈಯಿಂದ ಬ್ಯಾಗುಗಳನ್ನು ಕಿತ್ತುಕೊಂಡು ಮನೆವರೆಗೂ ಹೊತ್ತು ತಂದು, ಬಾಗಿಲಲ್ಲಿ ಕೊಡೋರು! ಈಗಿನ ಹುಡುಗರು ಪ್ರೀತಿ ಗೀತಿ ಅನ್ನುವಂತೆ ಆಗಿನ ಕಾಲಕ್ಕೇ, ಆ ವಯಸ್ಸಿಗೇ ನಮಗೆ!... ಸ್ಪಷ್ಟವಾಗಿ ಹೇಳಿಕೊಳ್ಳಲು ಬರದಿದ್ದರೂ, ಪರಸ್ಪರರಿಗೆ ತಮ್ಮ ನಡುವೆ ಇರಬಹುದಾದ ನವಿರಾದ ಭಾವನೆಯ ಅರಿವಿತ್ತು! ನಾನು ಏಳನೇ ಕ್ಲಾಸಿನವರೆಗೆ ಓದಿ ನಿಲ್ಲಿಸಿಬಿಟ್ಟೆ. ಇವರು ದೇವಪುರದಲ್ಲಿ ಹತ್ತನೇ ತರಗತಿವರೆಗೆ ಓದಿ, ನಂತರ ಗುಬ್ಬಿಯಲ್ಲಿ ಪಿಯುಸಿ ಮಾಡಿದರು. ಓದುವ ಆಸೆ ಇದ್ದರೂ, ಮನೆಯ ಜವಾಬ್ದಾರಿಯನ್ನು ಹೊರಬೇಕಾದ ಅವಶ್ಯಕತೆ ಇದ್ದುದರಿಂದ, ಅಲ್ಲೇ ಗುಬ್ಬಿಯಲ್ಲಿ ಒಂದು ಅಕ್ಕಿಮಂಡಿಯಲ್ಲಿ ಲೆಕ್ಕ ಬರೆಯುವ ಕೆಲಸಕ್ಕೆ ಸೇರಿಕೊಂಡರು. ನಮ್ಮಪ್ಪ ನನ್ನ ಒಳ